ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-12**

ಸಂಖ್ಯೆ: DPUE/EST10/SEN/2/2020-ADMN ದಿನಾಂಕ : 20-05-2022

## ಜ್ಞಾಪನ

**ವಿಷಯ:** ಪದವಿ ಪೂರ್ವ ಶಿಕ್ಷಣ ಇಲಾಖೆಯ ವಾಹನ ಚಾಲಕ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಈ ಕಚೇರಿ ಜ್ಞಾಪನ ಸಂಖ್ಯೆ: ಪಪೂಶಿಇ-1/ಆವಿ-ಎ/ವಿನಿ-1/ಜೇಷ್ಠತೆ/ 2019-20 ದಿನಾಂಕ; 16-11-2019
2. ಸರ್ಕಾರದ ಪತ್ರ ಸಂಖ್ಯೆ: ಇಪಿ 82 ಡಿಜಿಡಿ 2020 ದಿ:25-09-2020
3. ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧೀಕ್ಷಕರ ವೃಂದದ ಬೋಧಕೇತರ ನೌಕರರ ಸೇವಾ ಜೇಷ್ಠತೆ ಪಟ್ಟಿ ಪರಿಷ್ಕರಣೆ ಕುರಿತು ನಡೆದ ದಿನಾಂಕ: 03-07-2021ರ ಸಭಾ ನಡಾವಳಿ.
4. ಈ ಕಚೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ; 27/09/2021 ರಂದು ಪ್ರಕಟಿಸಿದ ವಾಹನಚಾಲಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ.

-*-

ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧೀಕ್ಷಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಿಂದ ಬಾದಿತರಾದ ಹಲವಾರು ನೌಕರರ ಪರಿಶೀಲನಾರ್ಹವಾದ ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಪರಿಶೀಲಿಸಿ, ಈ ಸಂಬಂಧ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಲಾಗಿತ್ತು. ಉಲ್ಲೇಖ-2ರ ಸರ್ಕಾರದ ಪತ್ರದಲ್ಲಿ ಅಧೀಕ್ಷಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪುನಃ ಆಕ್ಷೇಪಣೆಗಳನ್ನು ಆಹ್ವಾನಿಸಿ ಜೇಷ್ಠತಾ ಪಟ್ಟಿಯನ್ನು ಪುನರ್ ಪ್ರಕಟಿಸಲು ಸರ್ಕಾರವು ಅನುಮತಿ ನೀಡಿರುತ್ತದೆ. ಸದರಿ ಅನುಮತಿ ಮೇರೆಗೆ ಅಧೀಕ್ಷಕರ ವೃಂದದ ಬೋಧಕೇತರ ನೌಕರರ ಸೇವಾ ಜೇಷ್ಠತಾ ಪಟ್ಟಿ ಪರಿಷ್ಕರಣೆ ಮಾಡುವ ಸಂಬಂಧ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ: 03-07-2021ರಂದು ಸಭೆ ನಡೆಸಿ ಸಭಾನಡಾವಳಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಭಾನಡವಳಿಯಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಅವಲೋಕಿಸಲಾಗಿ, ಕೇವಲ ಅಧೀಕ್ಷಕರ ವೃಂದದ ಜೇಷ್ಠತಾ ಪಟ್ಟಿಯಲ್ಲದೇ ಪೋಷಕ (Feeder cadre) ವೃಂದದ ಹುದ್ದೆಗಳ ಜೇಷ್ಠತಾ ಪಟ್ಟಿಗಳಿಗೂ ಸಹ ನಿಯಮಾನುಸಾರ ಪುನಃ ಆಕ್ಷೇಪಣೆಗಳನ್ನು ಆಹ್ವಾನಿಸಿ ಜೇಷ್ಠತಾ ಪಟ್ಟಿಯನ್ನು ಪುನರ್ ಪ್ರಕಟಿಸಲು ಸೂಕ್ತವೆಂದು ತೀರ್ಮಾನಿಸಲಾಗಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖ-(1) ರಲ್ಲಿ ಪ್ರಕಟಿಸಿರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ **ವಾಹನ ಚಾಲಕ ವೃಂದದ** ಅಂತಿಮ ಜೇಷ್ಠತಾ ಪಟ್ಟಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು, ಇಲಾಖೆಯ ಪ್ರಾರಂಭದ ಮೂಲ ವೃಂದ (ಕಲ್ಯಾಣ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕೇತರ ನೌಕರರ) ಅನುಬಂಧ-1 ರಲ್ಲಿ, ಉಳಿಕೆ ವೃಂದದ (ಕಲ್ಯಾಣ ಕರ್ನಾಟಕೇತರ ನೌಕರರ) ಅನುಬಂಧ-2 ರಲ್ಲಿ ಹಾಗೂ ಸ್ಥಳೀಯ ವೃಂದ(ಕಲ್ಯಾಣ ಕರ್ನಾಟಕ ನೌಕರರ) ಅನುಬಂಧ-3 ರಲ್ಲಿ ವಾಹನ ಚಾಲಕ ವೃಂದದ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ:

20.09.2021 ರಲ್ಲಿದ್ದಂತೆ ಪ್ರಕಟಿಸಿ, ಸದರಿ ಜೇಷ್ಠತಾ ಪಟ್ಟಿಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ:27-10-2021ರ ಒಳಗಾಗಿ ಸಂಬಂಧಿಸಿದ ಬಾದಿತ ನೌಕರರು ತಮ್ಮ ಆಕ್ಷೇಪಣೆ /ಮನವಿಯನ್ನು ದೃಢೀಕೃತ ಪೂರಕ ದಾಖಲಾತಿಗಳೊಂದಿಗೆ ಸಮುಚಿತ ಮಾರ್ಗದ ಮೂಲಕ (ಉಪನಿರ್ದೇಶಕರು/ಪ್ರಾಂಶುಪಾಲರ ಮುಖೇನ) ಉಪನಿರ್ದೇಶಕರು (ಆಡಳಿತ), ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012 ಇವರಿಗೆ ಅಂಚೆ ಮೂಲಕ ಅಥವಾ ಮುದ್ದಾಂ ಆಗಿ ನಿಗಧಿತ ದಿನಾಂಕದೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು.

ದಿನಾಂಕ:27-09-2021 ರಲ್ಲಿ ಪ್ರಕಟಿಸಲಾಗಿರುವ ವಾಹನ ಚಾಲಕ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಗೆ ಯಾವುದೇ ಆಕ್ಷೇಪಣೆಗಳು ಸಲ್ಲಿಕೆಯಾಗಿರುವುದಿಲ್ಲ. ಆದ್ದರಿಂದ ಇಲಾಖೆಯ ಪ್ರಾರಂಭದ ಮೂಲ ವೃಂದ (ಕಲ್ಯಾಣ-ಕರ್ನಾಟಕ ಮತ್ತು ಕಲ್ಯಾಣ – ಕರ್ನಾಟಕೇತರ ನೌಕರರ) ಅನುಬಂಧ-1 ರಲ್ಲಿ, ಉಳಿಕೆ ವೃಂದದ (ಕಲ್ಯಾಣ-ಕರ್ನಾಟಕೇತರ ನೌಕರರ) ಅನುಬಂಧ-2 ಹಾಗೂ ಸ್ಥಳೀಯ ವೃಂದ (ಕಲ್ಯಾಣ-ಕರ್ನಾಟಕ ನೌಕರರ) ಅನುಬಂಧ-3 ರಲ್ಲಿ ವಾಹನ ಚಾಲಕ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**<u>ಪ್ರತಿಗಳು:</u>**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-ಇವರ ಮಾಹಿತಿಗಾಗಿ.
2. ರಾಜ್ಯಾಧ್ಯಕ್ಷರು, ಕರ್ನಾಟಕ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
3. ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ-ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.
4. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು-ಸಂಬಂಧಿಸಿದ ನೌಕರರ ಗಮನಕ್ಕೆ ತರುವುದು.
5. ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಅಂತರ್‌ಜಾಲದಲ್ಲಿ ಪ್ರಕಟಿಸಲು ಹಾಗೂ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಇ-ಮೇಲ್ ಮಾಡಲು ಸೂಚಿಸಿದೆ.
6. ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕೇತರ ನೌಕರರ ಸಂಘ (ರಿ), ಬೆಂಗಳೂರು.
7. ಎಲ್ಲಾ ವಾಹನ ಚಾಲಕರಿಗೆ -ಸಂಬಂಧಿಸಿದ ಕಾಲೇಜಿನ /ಕಚೇರಿಯ ಮುಖ್ಯಸ್ಥರ ಮೂಲಕ.
8. ಕಚೇರಿ ಪ್ರತಿ.